ಶ್ರೀ ಕೆ.ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು).—

ಅ) ರೈತರಿಗೆ ಮನೆ ಕಟ್ಟಲು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ ೧೯೭೬ರಲ್ಲಿ ಈಗಾಗಲೇ ಸಾಕಷ್ಟು ವಿನಾಯಿತಿ ನೀಡಲಾಗಿದೆ. ಈ ಬಗ್ಗೆ ಸರ್ಕಾರದ ಮುಂದೆ ಯಾವ ಆಲೋಚನೆಯೂ ಇರುವುದಿಲ್ಲ.

ರಾಜ್ಯದಲ್ಲಿರುವ ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರುಗಳ ಬಗ್ಗೆ

೩೯೦. ಶ್ರೀ ಬಿ. ಸ್ವಾಮಿರಾವ್ (ಮಂಡ್ಯ).—ಮಾನ್ಯ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಜನ ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ ?

ಆ) ಅವರು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ?

ಇ) ಇವರನ್ನು ಖಾಯಂ ಮಾಡಲಾಗುವುದೇ ಹಾಗಾದರೆ ಎಂದಿನಿಂದ ಖಾಯಂ ಮಾಡಲಾಗುವುದು.

ಶ್ರೀ ಕೆ.ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು).—

ಅ)

ಪ್ರಾಥಮಿಕ ಶಾಲೆ	೩೫೫೪
ಪ್ರೌಢ ಶಾಲೆ	೩೫೬೫
ಕಿರಿಯ ಕಾಲೇಜು (ಉಪನ್ಯಾಸಕರು)	೮೫೯
ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರು	೫೧೭
ತಾಂತ್ರಿಕ ಶಿಕ್ಷಣ ಉಪನ್ಯಾಸಕರು	೧೮೪

ಪ್ರಾಥಮಿಕ ಶಿಕ್ಷಣ	ಪ್ರೌಢ ಶಿಕ್ಷಣ	ಕಿರಿಯ ಕಾಲೇಜು	ಪ್ರಥಮ ದರ್ಜೆ ಕಾಲೇಜು	ತಾಂತ್ರಿಕ ಶಿಕ್ಷಣ ಇಲಾಖೆ
೧೯೮೩ ರಿಂದ ೮೫ನೇ ವರ್ಷದ ಅವಧಿಯೊಳಗೆ ನೇಮಕ ಮಾಡಲಾಗಿದೆ	೮೪-೮೫ ೮೫-೮೬ ಸಾಲಿನಲ್ಲಿ ನೇಮಕ ಮಾಡಲಾಗಿದೆ	೮೪-೮೫ ರಿಂದ ಕೆಲಸ ಮಾಡುತ್ತಿದ್ದು ೧೦-೪-೧೯೮೫ರಲ್ಲಿ ಬಿಡುಗಡೆ ಮಾಡಿ ಪುನ: ೮೫-೮೬ರಲ್ಲಿ ಪುನರ್ ನೇಮಕ ಮಾಡಲಾಗಿದೆ	೮೪-೮೫ನೇ ಸಾಲಿನಿಂದ	೮೪-೮೫ನೇ ಸಾಲಿನಿಂದ

ಇ) ವಿಲೀನಗೊಳಿಸಲಾಗುವುದು ಕರಡು ನಿಯಮಾವಳಿಗಳು ರಚಿಸಲಾಗಿದೆ.

ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದ ಪದವೀದರರು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವುದು

೩೯೨. ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ).—ಮಾನ್ಯ ಕೃಷಿ, ತೋಟಗಾರಿಕೆ, ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆಲವು ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದ ಪದವೀದರರು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ತರಬೇತಿ ಪಡೆದ ಶಿಕ್ಷಕರನ್ನು ಬದಲಿಸುವ ಬಗೆಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳೇನಾದರೂ ಇವೆಯೇ ?

ಶ್ರೀ ಕೆ.ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಮಂತ್ರಿಗಳು).—

ಅ) ಹೌದು

ಆ) ಇಲ್ಲ.